ಎಳನೀರುಗಳ ಗೊಂಚಲು ಜೋತು ಬಿದ್ದಿದ್ದವು.

ಈಜುಕೊಳದ ಬದಿಯಲ್ಲಿ ಬಹಳಷ್ಟು ಬಿಳಿ ಬಣ್ಣದ ಡೆಕ್ ಚೇರುಗಳನ್ನು ಜೋಡಿಸಿಡಲಾಗಿತ್ತು. ಅವುಗಳ ಮೇಲೆ ವಿವಿಧ ಬಣ್ಣದ ಕೊಡೆಗಳು. ಈಜುಡುಗೆಯಲ್ಲಿ ಬಹಳಷ್ಟು ಗಂಡಸರು ಮತ್ತು ಹೆಂಗಸರು ಬಿದ್ದುಕೊಂಡು ಮೈ ಕಾಯಿಸಿಕೊಳ್ಳುತ್ತಿದ್ದರು. ಈಜುಕೊಳದಲ್ಲಿ ಮೂರ್ನಾಲ್ಕು ಹುಡುಗಿಯರು ಮತ್ತು ಹತ್ತು ಹನ್ನೆರಡು ಹುಡುಗರು ರಬ್ಬರ್ ಬಾಲ್ ಎಸೆಯುತ್ತಾ ದೊಡ್ಡ ಗದ್ದಲವೆಬ್ಬಿಸಿ ಆಡುತ್ತಿದ್ದರು.

ನಾನು ಅವರನ್ನೇ ಗಮನಿಸುತ್ತಿದ್ದೆ. ಯುವತಿಯರು ಹೋಟೆಲಿನಲ್ಲಿ ಉಳಿದುಕೊಂಡಿದ್ದರು. ಇಂಗ್ಲಿಷ್ ಹುಡುಗಿಯರೆಂಬುದರಲ್ಲಿ ಯಾವುದೇ ಅನುಮಾನಗಳಿರಲಿಲ್ಲ. ಹುಡುಗರು ನೋಡಲಿಕ್ಕೆ ಅಮೆರಿಕನ್ನರಂತೆ ಕಾಣಿಸುತ್ತಿದ್ದರು. ಇಂದು ಬೆಳಿಗ್ಗೆ ಅಮೆರಿಕನ್ ನೌಕಾದಳದ ತರಬೇತಿ ಹಡಗು ಬಂದರಿನಲ್ಲಿ ಲಂಗರು ಹಾಕಿತ್ತು. ಹುಡುಗರು ಅಲ್ಲಿಂದ ಬಂದಿರಬೇಕೆಂದು ನಾನು ಊಹಿಸಿದೆ.

ಒಂದು ಹಳದಿ ಕೊಡೆಯ ಕೆಳಗೆ ನಾಲ್ಕು ಡೆಕ್ ಚೇರುಗಳು ಖಾಲಿ ಇದ್ದವು. ನಾನೊಂದು ಚೇರಿನಲ್ಲಿ ಆಸೀನನಾಗಿ ಸಿಗರೇಟನ್ನು ಹಚ್ಚುತ್ತಾ ಬಿಯರು ಹೀರತೊಡಗಿದೆ.

ಅಮೆರಿಕನ್ ಹುಡುಗರು ಮತ್ತು ಇಂಗ್ಲಿಷ್ ಹುಡುಗಿಯರ ಮಧ್ಯೆ ಸ್ನೇಹ ಗಟ್ಟಿಯಾಗುತ್ತಿದ್ದಂತೆಯೇ ಹುಡುಗರು ನೀರೊಳಗೆ ಮುಳುಗು ಹಾಕಿ ಹುಡುಗಿಯರ ಕಾಲೆಳೆಯುವ ಆಟವಾಡತೊಡಗಿದರು.

ಆಗ ನನಗೆ ಆ ಮುದುಕನ ಮೇಲೆ ದೃಷ್ಟಿ ಹೊರಳಿತು. ಈಜುಕೊಳದ ದಡದಲ್ಲಿ ಅವನು ಅವಸರವಸರವಾಗಿ ಹೆಜ್ಜೆಗಳನ್ನು ಹಾಕುತ್ತಾ ಬರುತ್ತಿದ್ದ. ಅವನು ಬಿಳಿಯ ಸೂಟ್ ಧರಿಸಿದ್ದ. ನಡೆದುಕೊಂಡು ಬರುವಾಗ ಅವನು ನೆಗೆದುಕೊಂಡು ಬರುತ್ತಿರುವವನಂತೆ ಕಾಣಿಸುತ್ತಿದ್ದ. ಅವನ ತಲೆಯ ಮೇಲೆ ಕ್ರೀಮ್ ಕಲರಿನ ಅಗಲವಾದ ಪನಾಮ ಹ್ಯಾಟು ಕಂಗೊಳಿಸುತ್ತಿತ್ತು.

ಅವನು ನನ್ನ ಬಳಿ ಬರುತ್ತಿದ್ದಂತೆ ಖಾಲಿ ಚೇರುಗಳನ್ನು ನೋಡಿ ನಿಂತುಕೊಂಡು ನನ್ನೆಡೆಗೆ ಒಂದು ಮುಗುಳ್ನಗೆಯನ್ನು ಬೀರಿದ. ನಾನೂ ಪ್ರತಿ ನಕ್ಕೆ.

'ನಾನಿಲ್ಲಿ ಕೂರಬಹುದೆ?' ಅವನು ಕೇಳಿದ.

'ಖಂಡಿತವಾಗಿಯೂ' ನಾನೆಂದೆ.

ಕುರ್ಚಿಯನ್ನೊಮ್ಮೆ ಪರೀಕ್ಷಿಸಿ ಅವನು ಕಾಲಮೇಲೆ ಕಾಲು ಹಾಕಿ ಕುಳಿತುಕೊಂಡ. ಅವನ ಬಿಳಿ ಬಣ್ಣದ ಶೂಗಳ ಮೇಲೆ ಗಾಳಿಯಾಡಲು ಸಣ್ಣ ಸಣ್ಣ ರಂಧ್ರಗಳಿರುವುದು ನನ್ನ ಗಮನಕ್ಕೆ ಬಂದಿತು.

'ಎಷ್ಟೊಂದು ಸುಂದರವಾದ ಸಂಜೆ!' ಅವನು ಉದ್ಗರಿಸಿದ. 'ಜಮೈಕಾದ ಸಂಜೆಗಳ ಬಗ್ಗೆ ಕೇಳುವುದೇ ಬೇಡ.' ಅವನ ಉಚ್ಚಾರದ ಧಾಟಿಯಿಂದ ಅವನು ಇಟಾಲಿಯನನೋ, ಸ್ಪೇನಿನವನೋ ಎಂಬುದು ಗೊತ್ತಾಗಲಿಲ್ಲ. ಸಮಯ ಕಳೆದಂತೆ ಅವನು ಖಂಡಿತಾ ದಕ್ಷಿಣ ಅಮೆರಿಕದವನೆಂದು ನನಗೆ ಖಾತರಿಯಾಯಿತು. ಅವನಿಗೆ ಸುಮಾರು ಎಪ್ಪತ್ತು ವರ್ಷ ವಯಸ್ಸಾಗಿತ್ತು.

'ಈ ಮಕ್ಕಳು ಯಾರು? ಹೋಟೆಲಿನವರಂತೂ ಅಲ್ಲ.' ಈಜುಕೊಳದ ಕಡೆಗೆ ಬೆರಳು ತೋರಿಸುತ್ತಾ ಅವನು ಕೇಳಿದ.

'ತರಬೇತಿಯಲ್ಲಿರುವ ಅಮೆರಿಕನ್ ನೇವಿಯವರಂತೆ ಕಾಣಿಸುತ್ತಿದ್ದಾರೆ' ನಾನೆಂದೆ.